# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಗಿರಿಯಾಪುರದ ಬಿದ್ದಪ್ಪ ತಂದೆ ಕೆಂಚಪ್ಪ,<br>ಯಲ್ಲಾಪುರ ಗ್ರಾಮ, ಗೊರವೆಹಳ್ಳಿ (ಪೋ),<br>ಹರಪನಹಳ್ಳಿ ತಾ., ದಾವಣಗೆರೆ ಜಿ. | ಮುದ್ದಿ ಪುಟ್ಟಮ್ಮ ಗಂಡ ಲೇಟ್ ಮುದ್ದಿ ಕರಿಯಪ್ಪ,<br>ಕೆ.ವೀರಾಪುರ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:–

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಕೆ.ಗಿರಿಯಾಪುರ | 145 | 2–78 | ಖುಷ್ಕಿ |
| 2. | ,, | 146 | 8–85 | ,, |

*****

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಕೆ.ಗಿರಿಯಾಪುರ ಗ್ರಾಮದ ಸ.ನಂ.145 ವಿ:2–78 ಮತ್ತು 146 ವಿ:8–85 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಯಲ್ಲಾಪುರ ಗ್ರಾಮದ ನಿವಾಸಿಯಾದ ಗಿರಿಯಾಪುರದ ಬಿದ್ದಪ್ಪ ತಂದೆ ಕೆಂಚಪ್ಪ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿನಾಂಕ 04–05–2015 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:12–05–2015 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:09–06–2015 ರಂದು ಕೆ.ವೀರಾಪುರ ಗ್ರಾಮದ ಮುದ್ದಿ ಪುಟ್ಟಮ್ಮ ಗಂಡ ಲೇಟ್ ಮುದ್ದಿ ಕರಿಯಪ್ಪ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.40/2014–15 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:03–09–2015 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಾಗಿ ಡಯಗ್ಲಾಟ್ ಪ್ರತಿ, ಕಂಪ್ಯೂಟರ್ ಪಹಣಿ ಪ್ರತಿ, ವಂಶವೃಕ್ಷ ದೃಢೀಕರಣ ಪತ್ರದ ಪ್ರತಿ, ನಮೂನೆ–15 ಇ.ಸಿ. ಪ್ರತಿ, ಮರಣದ ಅಲಭ್ಯ ಪ್ರಮಾಣ ಪತ್ರದ ಪ್ರತಿಗಳು, ಪಡಿತರ ಚೀಟಿ ಪ್ರತಿ, ಚುನಾವಣೆ ಗುರುತಿನ ಚೀಟಿ ಪ್ರತಿ ಸಲ್ಲಿಸಿರುತ್ತಾರೆ. ತಕರಾರುದಾರರು ಹಾಜರಾಗಿ ಇ.ಸಿ. ಪ್ರತಿಗಳು, ಕೈ ಬರಹ ಪಹಣಿ ಪ್ರತಿಗಳು, ಕಂಪ್ಯೂಟರ್ ಪಹಣಿ, ಡಯಾಗ್ಲೇಟ್ ಪ್ರತಿ, ಬಾಕಿ ಪಾವತಿ ರಸೀದಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ತಕರಾರುದಾರರು ತಾವೇ ಈ ಜಮೀನುಗಳನ್ನು ಉಳುಮೆ ಮಾಡುತ್ತಿದ್ದು, ನಮ್ಮ ಸ್ವಾಧೀನಾನುಭವದಲ್ಲಿರುತ್ತವೆ ಎಂದು ತಿಳಿಸಿರುತ್ತಾರೆ. ಮೂಲ ಪಟ್ಟಾದಾರ ಗಿರಿಯಾಪುರ ಬಕ್ಕಪ್ಪ ನಮ್ಮ ವಂಶದವರೆಂದು ಅರ್ಜಿದಾರರು ಮತ್ತು ತಕರಾರುದಾರರು ಮೌಖಿಕವಾಗಿ ತಿಳಿಸಿರುತ್ತಾರೆ.

ಅರ್ಜಿದಾರರು ಮತು ತಕರಾರುದಾರರು ಸಲ್ಲಿಸಿದ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಅರ್ಜಿದಾರರು ಹಕ್ಕು ಬದಲಾವಣೆ ಸಲ್ಲಿಸಿದ ವಂಶವೃಕ್ಷ ಅಫಿಡೆವಿಟ್‌ನಲ್ಲಿ ಬಕ್ಕಪ್ಪ ತಂದೆ ಲೇಟ್ ಬಸಪ್ಪ ಮತ್ತು ಹಿರಿಯಮ್ಮ ಇವರಿಗೆ 1)ಕೆಂಚಪ್ಪ ಮತ್ತು 2)ಹನುಮಮ್ಮ ಇವರು ಮಕ್ಕಳಾಗಿರುತ್ತಾರೆ. ಕೆಂಚಪ್ಪ ಮತ್ತು ಭರಮಮ್ಮ ಇವರಿಗೆ ಬಿದ್ದಪ್ಪ ಹಾಗೂ ಹನುಮಮ್ಮ ಇವರಿಗೆ ಸಣ್ಣ ಕೆಂಚಮ್ಮ ಇವರು ಮಕ್ಕಳಾಗಿರುತ್ತಾರೆ. ಹರಪನಹಳ್ಳಿ ಬಕ್ಕಪ್ಪ ತಂದೆ ಬಸಪ್ಪ, ಹಿರಿಯಮ್ಮ, ಕೆಂಚಪ್ಪ ತಂದೆ ಬಕ್ಕಪ್ಪ, ಭರಮಮ್ಮ ಗಂಡ ಕೆಂಚಪ್ಪ ಇವರ ಅಲಭ್ಯ ಪ್ರಮಾಣ ಪತ್ರದ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ದಿ:3–7–1998 ರಂದು ಹನುಮವ್ವ ಗಂಡ ಫಕ್ಕೀರಪ್ಪ ಇವರು ಮರಣ ಹೊಂದಿದ ಬಗ್ಗೆ ಮರಣ ಪ್ರಮಾಣ ಪ್ರತದ ಪ್ರತಿ ಸಲ್ಲಿಸಿರುತ್ತಾರೆ. ಗೂಳಪ್ನರ ಬಿದ್ದಪ್ಪ ತಂದೆ ಕೆಂಚಪ್ಪ ಇವರ ಚುನಾವಣೆ ಗುರುತಿನ ಚೀಟಿ ಸಂಖ್ಯೆ FWL2074391, ಕೆಂಚಮ್ಮ ಗಂಡ ಹನುಮಂತಪ್ಪ ಇವರ ಚುನಾವಣೆ ಗುರುತಿನ ಚೀಟಿ ಸಂಖ್ಯೆ JML8401838 ಹಾಗೂ ಪಡಿತರ ಚೀಟಿ ಸಂಖ್ಯೆ HH14101697 ಸಲ್ಲಿಸಿರುತ್ತಾರೆ. ಹಾಲಿ ಪಹಣಿಗಳು ಬಕ್ಕಪ್ಪ ಗಿರಿಯಾಪುರ ಇವರ ಹೆಸರಿನಲ್ಲಿ ಇರುತ್ತವೆ. ತಕರಾರುದಾರರು ಸಲ್ಲಿಸಿದ ತಕರಾರು ಅರ್ಜಿಯಲ್ಲಿ ಮುದ್ದಿ ಪಕ್ಕೀರಪ್ಪ, ಮುದ್ದಿ ಸಣ್ಣ ಪಕ್ಕೀರಪ್ಪ, ಮುದ್ದಿ ಕರಿಯಪ್ಪ, ಮುದ್ದಿ ಬಸಪ್ಪ ಇವರು ಸಾಗುವಳಿ ಕಾಲಂನಲ್ಲಿ ಇದ್ದು, ಈ ಜಮೀನುಗಳನ್ನು ತಾತ ಮುತ್ತಾತ ಕಾಲದಿಂದಲೂ ಹೊಲವನ್ನು ಸಾಗುವಳಿ ಮಾಡುತ್ತಾ ಬಂದಿದ್ದೇವೆ. ಪಹಣಿಯಲ್ಲಿ ಗಿರಯಾಪುರ ಬಕ್ಕಪ್ಪ ಎಂಬ ಹೆಸರಿದ್ದು, ಇವರ ಸಂಬಂಧಿಕರು ಯಾರು ಇಲ್ಲದಿರುವುದರಿಂದ ಇಲ್ಲಿಯವರೆಗೂ ಯಾವ ತಕರಾರು ಬಂದಿರುವುದಿಲ್ಲ. ಈಗ ಗಿರಿಯಾಪುರ ಬಿದ್ದಪ್ಪ ತಂದೆ ಕೆಂಚಪ್ಪ ಇವರು ಮ್ಯುಟೇಷನ್‌ಗೆ ಅರ್ಜಿ ಹಾಕಿರುತ್ತಾರೆ. ಆ ಕಾರಣಕ್ಕಾಗಿ ಮ್ಯುಟೇಷನ್ ಮಾಡಬಾರದೆಂದು ವಿನಂತಿಸಿರುತ್ತಾರೆ. ಡಯಾಗ್ಲಾಟ್ ಪ್ರಕಾರ ಮೆಲ್ಕಂಡ ಜಮೀನುಗಳು ಗಿರಿಯಾಪುರ ಬಕ್ಕ ಎಂಬ ಹೆಸರಿಗೆ ನಮೂದು ಇರುತ್ತದೆ. ಅರ್ಜಿದಾರರು ವಿಚಾರಣೆ ವೇಳೆ ಸಲ್ಲಿಸಿದ ದಾಖಲೆಗಳಲ್ಲಿ ನಮೂನೆ 15 ಇ.ಸಿ. ಪ್ರತಿಯಲ್ಲಿ ಸ.ನಂ.145 ವಿ:2–78 ಮತ್ತು 146 ಪೈಕಿ 2–22 ಎಕರೆ ಜಮೀನನ್ನು ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಎಂಬುವವರು ಮುದಿಮಲ್ಲಪ್ಪ ಇವರಿಗೆ ದಿ:8–7–68 ರಂದು ರೂ.400/– ಗಳಿಗೆ ಕ್ರಯಕ್ಕೆ ನೀಡಿದ್ದು ಇರುತ್ತದೆ. ತಕರಾರುದಾರರು ಸಲ್ಲಿಸಿದ ನಮೂನೆ–15 ಇ.ಸಿ. ಪ್ರತಿಯಲ್ಲಿಯೂ ಸಹ ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಎಂಬುವವರು ಮುದಿಮಲ್ಲಪ್ಪ ಇವರಿಗೆ ಮಾರಾಟ ಮಾಡಿದ ವಿಚಾರ ಒಂದೇ ಇರುತ್ತದೆ. ಆದರೆ ಕೈ ಬರಹ ಪಹಣಿಯಲ್ಲಿ ಗಿರಿಯಾಪುರ ಬಕ್ಕಪ್ಪ ಎಂಬ ಹೆಸರೇ ಮುಂದುವರೆದಿರುತ್ತದೆ. ಸದರಿ ಕ್ರಯ ವ್ಯವಹಾರ ನಮೂದಾಗಿರುವುದಿಲ್ಲ. ಸದರಿ ಜಮೀನನ್ನು ಮಾರಾಟ ಮಾಡಿದ ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಇವರುಗಳು ಗಿರಿಯಾಪುರದ ಬಕ್ಕಪ್ಪನಿಗೆ ಏನಾಗಬೇಕು? ಗಿರಿಯಾಪುರ ಬಕ್ಕಪ್ಪನ ವಾರಸುದಾರನೇ ಅಥವಾ ಗಿರಿಯಾಪುರದ ಬಕ್ಕಪ್ಪನಿಂದ ಕ್ರಯಕ್ಕೆ ಪಡೆದನೇ? ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಇವರುಗಳು ಯಾರು? ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಇವರುಗಳಿಗೆ ಸದರಿ ಜಮೀನನ್ನು ಮಾರಾಟ ಮಾಡುವ ಹಕ್ಕು ಹೇಗೆ ಲಭಿಸಿತು? ಎಂಬ ವಿಚಾರಗಳನ್ನು ಅರ್ಜಿದಾರರಾಗಲೀ ಅಥವಾ ತಕರಾರುದಾರರಾಗಲೀ ತಿಳಿಸಿಲ್ಲ. ಒಂದು ವೇಳೆ ಗಿರಿಯಾಪುರ ಬಕ್ಕಪ್ಪನಿಗೆ ಇವರು ವಾರಸುದಾರರೇ

ಆಗಿದ್ದಲ್ಲಿ, ಅರ್ಜಿದಾರರು ಸಲ್ಲಿಸಿದ ವಂಶವೃಕ್ಷದ ಅಫಿಡೆವಿಟ್‌ನಲ್ಲಿ ಏಕೆ ಅವರ ಹೆಸರನ್ನು ತೋರಿಸಿಲ್ಲ? ಎಂಬ ಪ್ರಶ್ನೆ ಏಳುತ್ತದೆ. ತಕರಾರುದಾರರು ವಿಚಾರಣೆ ವೇಳೆ ಮೌಖಿಕವಾಗಿ ತಿಳಿಸಿದಂತೆ, ಅರ್ಜಿದಾರರು ಗಿರಿಯಾಪುರ ಬಕ್ಕಪ್ಪನ ವಾರಸುದಾರರಲ್ಲ ಎಂಬುದು ನಿಜವಾದಲ್ಲಿ ಅರ್ಜಿದಾರರು ತಮ್ಮ ಹಕ್ಕನ್ನು ಹಾಗೂ ವಾರಸತ್ವವನ್ನು ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇದೆ. ಸ.ನಂ.145 ವಿ:2–78 ಮತ್ತು 146 ಪೈಕಿ 2–22 ಎಕರೆ ಜಮೀನನ್ನು ದೊಡ್ಡ ಪಕ್ಕೀರಪ್ಪ, ಸಣ್ಣಪಕ್ಕೀರಪ್ಪ ಎಂಬುವವರಿಂದ ದಿ:8–7–68 ರಂದು ಕ್ರಯಕ್ಕೆ ಪಡೆದ ಮುದಿಮಲ್ಲಪ್ಪನು ತಕರಾರುದಾರರ ಪೂರ್ವಜರು ಇದ್ದಲ್ಲಿ ಇಲ್ಲಿಯವರೆಗೆ ಯಾವುದೇ ಹಕ್ಕು ಬದಲಾವಣೆ ಏಕೆ ಮಾಡಿಸಿಕೊಂಡಿಲ್ಲ ಎಂಬ ಬಗ್ಗೆ ತಕರಾರುದಾರರು ತಿಳಿಸಿಲ್ಲ. ತಕರಾರುದಾರರು ಸಲ್ಲಿಸಿದ 1999–2000ರ ಸ.ನಂ.146 ವಿ:8–85 ರ ಕೈ ಬರಹ ಪಹಣಿ ಪ್ರತಿಯಲ್ಲಿ ಕಾಲಂ 12(2) ರಲ್ಲಿ ತಲಾರಿ ಬಕ್ಕಪ್ಪ, ಪುಟ್ಟವ್ವ, ದ್ಯಾಮವ್ವ, ಶಾಂತವ್ವ ಎಂಬ ಹೆಸರುಗಳು ನಮೂದು ಇರುತ್ತದೆ ಮತ್ತು ಸ.ನಂ.145 ವಿ:2–78 ಎಕ್ರೆ ಕೈ ಬರಹ ಪಹಣಿ ಕಾಲಂ 12(2) ರಲ್ಲಿ ಎಂ.ಪಕ್ಕೀರಪ್ಪ, ಪುಟ್ಟವ್ವ ಎಂಬ ಹೆಸರುಗಳು ನಮೂದು ಇರುತ್ತದೆ. ಇದರಿಂದ ತಕರಾರುದಾರರು ಸಾಗುವಳಿ ಮಾಡುತ್ತಾ ಬಂದಿರುವುದು ಕಂಡು ಬರುತ್ತದೆ. ಇದರಿಂದ ತಕರಾರುದಾರರಿಗೂ ಸದರಿ ಜಮೀನುಗಳಲ್ಲಿ ಹಕ್ಕು ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅರ್ಜಿದಾರರು ತಮ್ಮ ಹಕ್ಕನ್ನು ಸೂಕ್ತ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/03/2015–16 ದಿನಾಂಕ:02–05–2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.40/2014–15 ರ ಪ್ರಕರಣದಲ್ಲಿ ತಕರಾರುದಾರರ ಅರ್ಜಿಯನ್ನು ಪುರಸ್ಕರಿಸಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ. ಸದರಿ ಆದೇಶದಿಂದ ಬಾದೆಯಾದಲ್ಲಿ ಅರ್ಜಿದಾರರು ತಮ್ಮ ಹಕ್ಕನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಸಾಭೀತು ಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.